## ಇಲ್ಲಿಯವರೆಗೆ

ಭಾವೇಶ್‌ರ 'ಸನ್‌ರೈಸ್ ಕ್ಯಾಂಡಲ್ಸ್'ನ ಜೈತ್ರಯಾತ್ರೆ ಅಬಾಧಿತವಾಗಿತ್ತು. ಸಹೃದಯರ ಬೆಂಬಲದಿಂದಾಗಿ ಹೋದಲ್ಲೆಲ್ಲ ಒಳ್ಳೆಯ ವ್ಯಾಪಾರ ಹಾಗೂ ಸ್ನೇಹಸಂಬಂಧದ ಸಂಪಾದನೆ. ಈ ಓಡಾಟದಲ್ಲಿ ಭಾವೇಶ್ ಹಲವು ಪಾಠಗಳನ್ನೂ ಕಲಿತರು. ನೀತಾ ಅವರ ಮ್ಯಾನೇಜ್‌ಮೆಂಟ್ ಕೌಶಲಗಳು ಗ್ರಾಹಕರನ್ನು ಆಕರ್ಷಿಸಲು ಸಹಾಯಕವಾಗಿದ್ದವು. ವ್ಯಾಪಾರದ ಜೊತೆಗೆ, ಆಯೋಜಕರೊಂದಿಗೆ ಉತ್ತಮವಾದ ಸಂಬಂಧ ಹೊಂದುವುದಕ್ಕಾಗಿಯೂ ಭಾವೇಶ್ ಬಳಗ ವಿಶೇಷ ಶ್ರಮ ಹಾಕುತ್ತಿತ್ತು.



ಇಳಿದುಕೊಳ್ಳುವ ವ್ಯವಸ್ಥೆಯನ್ನೂ ಮಾಡಿದ್ದರು. ಇಷ್ಟೊಂದು ಜನ ಸ್ವಯಂಸೇವಕರು ತಮ್ಮ ಪ್ರದರ್ಶನವನ್ನು ಸಂಭಾಳಿಸಲು ಸಿಕ್ಕಾಗ ಭಾವೇಶ್ ಖುಷಿಯಿಂದಲೇ ಬಹಳಷ್ಟು ಮೋಂಬತ್ತಿಗಳನ್ನು ಮರುದಿನವೇ ಸಾರಿಗೆ ವ್ಯವಸ್ಥೆಯ ಮೂಲಕ ಗೋವಾಕ್ಕೆ ಕಳುಹಿಸಿಬಿಟ್ಟರು.

ಈ ಮಿತ್ರರು ಗೋವಾಕ್ಕೆ ಹೋಗಲು ತಮ್ಮ ಇನ್ನೋವ ಕಾರಿನ ವ್ಯವಸ್ಥೆ ಮಾಡಿದ್ದರು. ದಿನಾಂಕ 7 ಏಪ್ರಿಲ್ 2011ರ ರಾತ್ರಿ, ಭಾವೇಶ್, ನೀತಾ ಆ ಇಬ್ಬರು ದಂಪತಿಗಳ ಜೊತೆಯಲ್ಲಿ ಗೋವಾಕ್ಕೆ ಹೊರಟರು. 400 ಕಿಲೋಮೀಟರ್ ದೂರವನ್ನು ಕ್ರಮಿಸಿ ಬೆಳಗ್ಗೆ ಗೋವಾ ತಲುಪಿದ್ದರು. ಪ್ರದರ್ಶನ ಹಾಕಲು ಹೋಟೆಲಿನ ಒಳಗೆ ಹೋದಾಗ, ಆ 12000 ರೂಪಾಯಿ ಪಾಸಿಗೆ ಊಟ ತಿಂಡಿ ಅಲ್ಲದೆ, ಅಲ್ಲಿದ್ದ ಅನೇಕ ಬಿಯರ್ ಅಂಗಡಿಗಳಲ್ಲಿ ಪುಕ್ಕಟ್ಟೆ ಬಿಯರ್ ಲಭ್ಯವಿದೆ ಎಂದು ಭಾವೇಶ್ ಅವರ ಸ್ನೇಹಿತರಿಗೆ ತಿಳಿಯಿತು. ಬಿಯರ್ ಕುಡಿಯುವುದರಲ್ಲಿ ಅವರು ಎಷ್ಟು ಮಗ್ನರಾದರು ಎಂದರೆ, ಪ್ರದರ್ಶನಕ್ಕೆ ಹಾಕಿದ್ದ ಮೋಂಬತ್ತಿಯ ಸ್ಟಾಲ್ ಹತ್ತಿರ ಸುಳಿಯಲೇ ಇಲ್ಲ. ಕುಡಿದು ಭರ್ಜರಿ ಮತ್ತಿನಲ್ಲಿದ್ದ ಅವರನ್ನು ಅಂಗಡಿಗೆ ಎಳೆತರುವುದು ಅಸಂಭವವಾಯಿತು. ಮೂರು ದಿನವೂ ಇದೇ ಕತೆ ಮುಂದುವರೆಯಿತು. ಅದು ಹೇಗೆ ಭಾವೇಶ್ ಮತ್ತು ನೀತಾ ಇಬ್ಬರೇ ಅಷ್ಟು ದಿನಗಳು ಪ್ರದರ್ಶನವನ್ನು ಸಂಭಾಳಿಸಿದರು ಎನ್ನುವುದು ಅವರಿಗೇ ತಿಳಿದಿತ್ತು. ಭಾವೇಶ್ ಮತ್ತು ನೀತಾ ಆಕಾಶ–ಭೂಮಿ ಒಂದು ಮಾಡಿ ಕಡೆಯ ದಿನ, ದಿನಾಂಕ 10 ಏಪ್ರಿಲ್ 2011ರಂದು ತಾವು ತಂದಿದ್ದ ಅಷ್ಟೂ ಮೋಂಬತ್ತಿಗಳನ್ನು ಮಾರಾಟ ಮಾಡಿದ್ದರು. ಈಗ ರಾತ್ರಿ ಹೊರಟು ಅಲ್ಲಿಂದ ಪುಣೆಗೆ ಬೆಳಗ್ಗೆ ತಲುಪಬೇಕಿತ್ತು. ಸುಮಾರು 440 ಕಿಲೋಮೀಟರ್ ಹಾದಿ. ಊರಗಲವಿದ್ದ ಆ ದೊಡ್ಡ ಹೋಟೆಲಿನಲ್ಲಿ ತಮ್ಮ ಮಿತ್ರರನ್ನು ಹುಡುಕಿ ಎಳೆತರುವುದೇ ಕಷ್ಟವಿತ್ತು. ಇದೇ ಕೊನೆ ದಿನ ಎಂದು ಇವರ ಮಿತ್ರರು ಭರ್ಜರಿ ಬಿಯರ್ ಏರಿಸಿಬಿಟ್ಟಿದ್ದು, ತಮ್ಮ ಕಾಲ ಮೇಲೆ ನಿಲ್ಲುವುದೇ ಅವರಿಗೆ ಕಷ್ಟವಿತ್ತು.

ಒಂದು ಟ್ಯಾಕ್ಸಿ ಕರೆದು ಗೋವಾದ ಮಿತ್ರರನ್ನು ಅದರಲ್ಲಿ ಕೂರಿಸಿ ಅವರ ಮನೆಗೆ ಕಳುಹಿಸಿದರು. ಉಳಿದ ಇಬ್ಬರು ಮಹಾಬಲೇಶ್ವರದ ದಂಪತಿಗಳಿಗೆ ಆಸರೆ ನೀಡುತ್ತಾ, ಹೇಗೋ ಕಾರಿನಲ್ಲಿ ಕುಳ್ಳಿರಿಸಿದ್ದಾಯಿತು. ರಾತ್ರಿ ಸುಮಾರು 11 ಗಂಟೆಯ ಸಮಯ. ನೀತಾ ಕಾರು ಓಡಿಸತೊಡಗಿದರು. ಸ್ವಲ್ಪ ದೂರ ಬರಲಿಕ್ಕಿಲ್ಲ ಬಿರುಮಳೆ ಆರಂಭವಾಯಿತು. ಇದು ಸಾಲದು ಎಂಬಂತೆ ವೈಪರ್ ಬೇರೆ ಕೆಟ್ಟು ಕುಳಿತುಕೊಂಡಿತು. ನೀತಾ ಅವರಿಗೆ ಭಾವೇಶ್ ಹೇಳಿದರು, 'ಪ್ರಶಸ್ತಿ ಇನ್ನು ಯಾವಾಗಲಾದರೂ ತೆಗೆದುಕೊಂಡರಾಯಿತು. ಇಲ್ಲಿಯೇ ಯಾವುದಾದರೂ ಹೋಟೆಲ್ ಹತ್ತಿರ ನಿಲ್ಲಿಸು. ರಾತ್ರಿ ಉಳಿದುಕೊಂಡು ಬೆಳಗ್ಗೆ ಹೊರಡೋಣ. ಈ ಬಿರುಮಳೆಯಲ್ಲಿ ಡ್ರೈವ್ ಮಾಡುವುದು ಸುರಕ್ಷಿತವಲ್ಲ'. 'ಪ್ರಶಸ್ತಿ ಎಲ್ಲೂ ಹೋಗುವುದಿಲ್ಲ ಎಂದು ನನಗೂ ಗೊತ್ತು. ಆದರೆ ಮುಖ್ಯಮಂತ್ರಿಗಳ ಹಸ್ತದಿಂದ ತೆಗೆದುಕೊಳ್ಳುವ ಅವಕಾಶ ಮತ್ತೆ ಮತ್ತೆ ಬಾರದು. ನೀನು ಚಿಂತೆ ಮಾಡಬೇಡ. ನನ್ನಲ್ಲಿ ಭರವಸೆ ಇಡು. ಕಾರಿನ ಗಾಜನ್ನು ಒರೆಸುತ್ತಿರು' ಎಂದು ನೀತಾ ಕಾರನ್ನು ಜಾಗರೂಕವಾಗಿ ಓಡಿಸಿದರು.

ನೀತಾ ಸ್ವಲ್ಪವೂ ವಿರಾಮವಿಲ್ಲದೆ, ಯಾವೊಂದೂ ದೂರಿಲ್ಲದೆ, ನಿರಂತರವಾಗಿ ಕಾರು ಓಡಿಸಿ ಬೆಳಗ್ಗೆ 8 ಗಂಟೆಗೆ ಪುಣೆ ತಲುಪಿಸಿದರು. ತಮ್ಮ ಪತ್ನಿಯ ಕಾರು ಓಡಿಸುವ ನೈಪುಣ್ಯ ಭಾವೇಶ್ ಅವರಿಗೆ ಅಂದು ಮತ್ತಷ್ಟು ಅರ್ಥವಾಗಿತ್ತು. ಹೋಟೆಲ್ ಒಂದರಲ್ಲಿ ಇಳಿದುಕೊಂಡು, ಹತ್ತು ಗಂಟೆಯ ಹೊತ್ತಿಗೆ ಸಿದ್ಧವಾಗಿ, ಭಾವೇಶ್ ಅವರ ಹೆಸರನ್ನು ಕರೆದಾಗ ನೀತಾ ವೇದಿಕೆಯ ಬಳಿಗೆ ಭಾವೇಶ್ ಅವರನ್ನು ಕರೆದೊಯ್ದು ಬಿಟ್ಟರು. ಪ್ರಶಸ್ತಿ ಸ್ವೀಕರಿಸುವಾಗ ಭಾವೇಶ್ ಅವರಿಗೆ ಅನಿಸಿತ್ತು, ಈ ಪ್ರಶಸ್ತಿಗೆ ದಿಟವಾದ ಹಕ್ಕುದಾರರು ತಮ್ಮ ಪತ್ನಿ ನೀತಾ.

ಅಧ್ಯಾಯ–17

## ತಮ್ಮದಾದ ಗೂಡಿಗೆ

ಒಂದು ದಿನ ನೀತಾ ಅವರ ಸಂಬಂಧಿಕರಾರೋ, ಲಂಡನ್‌ನಿಂದ ತುಂಬಾ ಪ್ರತಿಷ್ಠಿತ ಕಣ್ಣಿನ ವೈದ್ಯರೊಬ್ಬರು ಜಗನ್ನಾಥ್ ಪುರಿ ರಥಯಾತ್ರೆ ನೋಡಲು ಭುವನೇಶ್ವರಕ್ಕೆ ಬರುತ್ತಿರುವುದನ್ನು ತಿಳಿಸಿದರು. ಅವರ ಬಳಿ ಭಾವೇಶ್ ಅವರ ಕಣ್ಣಿಗೆ ಏನಾದರೂ ಪರಿಹಾರ ಇರಬಹುದು ಎಂದಾಗ ಮತ್ತೆ ಎದೆಯಲ್ಲಿ ಆಸೆಯ ಹೂವು ಅರಳಿತ್ತು. ನೀತಾ ಅವರ ಜೊತೆಯಲ್ಲಿ ಭಾವೇಶ್ ಭುವನೇಶ್ವರಕ್ಕೆ ಬಂದಿಳಿದರು. ಬಹಳಷ್ಟು ಆಶಾವಾದದಲ್ಲಿ ವೈದ್ಯರಿಗೆ ತೋರಿಸಿದರು. ಈ ವೈದ್ಯರು ಕೂಡಾ, ಇವರ ಸ್ಥಿತಿಗೆ ಪ್ರಪಂಚದಲ್ಲಿಯೇ ಇನ್ನು ಯಾವ ಚಿಕಿತ್ಸೆಯೂ ಇಲ್ಲ ಎಂದು ತಿಳಿಸಿದರು. ಮತ್ತೆ ನಿರಾಶೆ. ತಕ್ಷಣವೇ ಮಹಾಬಲೇಶ್ವರಕ್ಕೆ ಹಿಂತಿರುಗಲು ಬಯಸಿದರು. ಮನಸ್ಸು ಕುಸಿದಿತ್ತು. ಆದರೆ ಇಷ್ಟು ದೂರ ಬಂದಿರುವಾಗ ತಾವೂ ಕೂಡಾ ಜಗನ್ನಾಥನ ರಥಯಾತ್ರೆಯನ್ನು ನೋಡಿ ಹೋಗೋಣ ಎಂದು ನೀತಾ ಹೇಳಿದರು.

ಅದೆಂಥ ಜನಜಂಗುಳಿ. ಭಾವೇಶ್ ಅವರನ್ನು ಅಂಥಾ ಗುಂಪಿನ ಒಳಕ್ಕೆ ಹೊಗಿಸದೆ, ದೂರದಲ್ಲಿ ನಿಂತು ನೀತಾ ರಥಯಾತ್ರೆಯನ್ನು ನೋಡುತ್ತಾ ಭಾವೇಶ್ ಅವರಿಗೆ ವಿವರವಾಗಿ ವರ್ಣಿಸಿ ಕಣ್ಣಿಗೆ ಕಟ್ಟಿದ ಹಾಗೆ ಹೇಳುತ್ತಿದ್ದರು. ಹೀಗೇ ನಿಂತು ಸ್ವಲ್ಪ ಹೊತ್ತಾಗಿತ್ತು. ಏಕಾಏಕಿ ಓರ್ವ ವ್ಯಕ್ತಿ ಭಾವೇಶ್ ಅವರ ಕೈಹಿಡಿದು ಎಳೆಯುತ್ತಾ ಗುಂಪಿನ ನಡುವೆ ನುಗ್ಗಿ ನಡೆದುಬಿಟ್ಟರು. ಏನಾಗುತ್ತಿದೆ ಎಂದು ಭಾವೇಶ್ ಅವರಿಗೆ ತಿಳಿಯುವ ಮೊದಲೆ, ನೀತಾ ಅವರನ್ನು ಕೇಳುವ, ಕೂಗುವ ಮೊದಲೆ ಈ ವ್ಯಕ್ತಿ ಅವರ ಕೈ ಎಳೆಯುತ್ತಾ, ಆ ಜನಸಂದಣಿಯಲ್ಲಿ ಹೇಗೋ ದಾರಿ ಮಾಡಿ ನಡೆಯುತ್ತಿದ್ದರು. ಭಾವೇಶ್ ಅದೆಷ್ಟೋ ಜನಕ್ಕೆ ಡಿಕ್ಕಿ ಹೊಡೆದುಕೊಂಡೇ ಅವರ ಹಿಂದೆ ಅವರು ಎಳೆದತ್ತ ನಡೆದಿದ್ದರು. ಸ್ವಲ್ಪ ದೂರ ಹೋದ ಮೇಲೆ, ಆತ ಹರುಕು ಮುರುಕು ಹಿಂದಿಯಲ್ಲಿ ಮೆಟ್ಟಿಲು ಹತ್ತುವಂತೆ ಆದೇಶಿಸಿದ. ಒಂದಷ್ಟು ಮೆಟ್ಟಿಲು ಹತ್ತಿದಾಗ, ತಾನು ಸಾಕಷ್ಟು ಎತ್ತರದಲ್ಲಿ ಇದ್ದೇನೆ ಎಂಬ ಅರಿವು ಭಾವೇಶ್ ಅವರಿಗಾಯಿತು. ಕಾರಣ ಈಗ ಜನರ ಸದ್ದು ಕೆಳಗಿನಿಂದ ಕೇಳಿ ಬರುತ್ತಿತ್ತು. ಈಗ ಭಾವೇಶ್ ಅವರನ್ನು ಬಗ್ಗಲು ಹೇಳಿ, ಆ ಸಜ್ಜನ ಅವರ ಬಲಗೈಯನ್ನು ಎಳೆದು ಜಗನ್ನಾಥನ ಚರಣಗಳ ಸ್ಪರ್ಶ ಮಾಡಿಸಿದ್ದ. ಮರುಕ್ಷಣ, ಕರೆದೊಯ್ದ ವೇಗದಲ್ಲಿಯೇ ಗುಂಪಿನ ನಡುವೆ ನೂಕಿಕೊಂಡು ಅವರ ಕೈ ಎಳೆಯುತ್ತ ನೀತಾ ಇರುವ ಜಾಗಕ್ಕೆ ಕರೆತಂದು ಬಿಟ್ಟು ಮತ್ತೆ ಗುಂಪಿನಲ್ಲಿ ಮಾಯವಾದ. ಅರೆ ಕ್ಷಣ ನೀತಾ ಮತ್ತು ಭಾವೇಶ್ ದಿಗ್ಮೂಢರಾಗಿದ್ದರು. ಆತನಿಗೆ ಧನ್ಯವಾದ ಹೇಳಲು ಎಷ್ಟು ಹುಡುಕಿದರೂ ಆತ ಕಾಣಲಿಲ್ಲ. ಇದೂ ಕೂಡಾ ಚಮತ್ಕಾರದಂತೆ ಕಂಡಿತ್ತು. ಈ ಬದುಕ ಹಾದಿಯಲ್ಲಿ ಬದಿ ನಿಂತ ಅಥವಾ ಹಿಂದೆ ಉಳಿದುಬಿಟ್ಟ ಸಹ ಪ್ರಯಾಣಿಕರಿಗೆ ಸಹಾಯದ ಹಸ್ತ ನಾವು ಚಾಚಿದಾಗ ನಾವೊಂದು ಚಮತ್ಕಾರವನ್ನೇ ಮಾಡಿರುತ್ತೇವೆ. ಅಂದು ಬೀದಿಯಲ್ಲಿ ಭಿಕ್ಷೆ ಬೇಡಿ ಹೊರಟ ಕುರುಡರಿಗೆ, 'ಬನ್ನಿ ಎರಡರಷ್ಟು ಹಣ ಗಳಿಸುವಿರಂತೆ, ಉಚಿತ